**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.123/2024**

ಪ್ರಾ.ಸಾ. 11

ಚಾ.ಸಾ. 2

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 17.02.2026**

| | |
|---|---|
| ಸಾಕ್ಷಿದಾರರ ಹೆಸರು | ಪ್ರಮೋದ್ |
| ತಂದೆಯ ಹೆಸರು | ಕುಳ್ಳಪ್ಪ |
| ವಯಸ್ಸು | 29 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ವಡ್ಡರದೊಡ್ಡಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ನ್ಯಾಯಾಲಯದ ಮುಂದಿರುವ 7 ನೇ ಆರೋಪಿಯನ್ನು ನೋಡಿದ್ದೇನೆ. ಅವರು ನಮ್ಮ ಊರಿನವರು. ಚಾಸಾ.1, 3 ಹಾಗೂ 4, 8 ರವರು ಪರಿಚಯ ಇದೆ. ಮೃತ ರಾಕೇಶ್ ರವರ ಪರಿಚಯ ನನಗೆ ಇದೆ. ಮೃತ ರಾಕೇಶ್ ರವರು ಸುಮಾರು 7-8 ವರ್ಷದ ಹಿಂದೆ ನಮ್ಮ ಊರಿನ ಅಭಿರವರ ಅಂಗಡಿಯ ಹತ್ತಿರ ದುಷ್ಕರ್ಮಿಗಳು ಮಚ್ಚಿನಿಂದ ಹಲ್ಲೆ ಮಾಡಿ ಕೊಲೆ ಮಾಡಿರುತ್ತಾರೆ. ಆರೋಪಿತರ ವಿರುದ್ಧ ಯಾರು, ಯಾತಕ್ಕಾಗಿ ದೂರು ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ಹೇಳಿಕೆ ಹಾಗೂ ಮರುಹೇಳಿಕೆ ನೀಡಿಲ್ಲ. ಸಾಕ್ಷಿ ಮುದ್ದೆ ಮಾಲು 6 ಮತ್ತು 7 ಅನ್ನು ನೋಡಿ ಇದೇ ಮೊದಲನೇ ಬಾರಿಗೆ ನೋಡುತ್ತಿರುವುದು ಎಂದು ನುಡಿಯುತ್ತಾರೆ. ಪ್ರಕರಣದ ಬಗ್ಗೆ ಬೇರೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು

ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

*2.* ನಾನು ಗಾರೆಕೆಲಸಕ್ಕೆ ಹೋಗುವಾಗ ಮೃತ ರಾಕೇಶನ ಪರಿಚಯ ಆಗಿದ್ದು, ನಾವಿಬ್ಬರು ಸ್ನೇಹಿತರು ಆಗಿದ್ದೆವು ಎಂದರೆ ಸರಿ. ಚಾಸಾ.*3* ಹಾಗೂ *8* ರವರು ಕೂಡ ನನ್ನ ಸ್ನೇಹಿತರು ಆಗಿದ್ದರು, ನಾವು ಎಲ್ಲಿ ಹೋದರು ನಾಲ್ಕೂ ಜನರು ಒಟ್ಟಿಗೆ ಹೋಗಿ ಬಂದು ಮಾಡುತ್ತಿದ್ದೆವು, ಮೃತ ರಾಕೇಶನಿಗೂ ಕಪ್ಪೆ ಅಲಿಯಾಸ್ ಮಧುವಿಗೂ ಯಾವುದೇ ವಿಚಾರದಲ್ಲಿ ವೈಮನಸ್ಸು ಇದ್ದು ಅವರಿಬ್ಬರಿಗೂ ಆಗುತ್ತಿರಲಿಲ್ಲ, ಅಭಿ, ಕಪ್ಪೆ, ಅಕ್ಷಯ್, ಸಿದ್ದ, ಧನರಾಜ್, ಆರೋಪಿತರು ಒಂದು ಗುಂಪು ಆಗಿದ್ದರೂ ಕಪ್ಪೆ ಗುಂಪಿಗೂ, ನಮಗೂ ಆಗುತ್ತಿರಲಿಲ್ಲ, ರಾಕೇಶ ಎಲ್ಲಾ ವಿಚಾರದಲ್ಲೂ ನನಗೆ ಬೆಂಬಲಿಸುತ್ತಿದ್ದ ಎಂದರೆ ಸರಿ.

*3.* ಈಗ್ಗೆ *4* ವರ್ಷದ ಹಿಂದೆ ನನ್ನ ಸ್ನೇಹಿತ ಕಿರಣ ರವರಿಗೆ ಪಟಾಕಿ ಹೊಡೆಯುವ ವಿಚಾರದಲ್ಲಿ ಅಭಿ ಗಲಾಟೆ ಮಾಡಿದ್ದ ಇದನ್ನು ಕೇಳಿದ್ದಕ್ಕೆ ಅವನು ನನಗೆ ಹೊಡೆಯಲು ಬಂದನು, ಆಗ ನಾನು ಚೂರಿಯಿಂದ ಕಿಬ್ಬೊಟ್ಟೆಗೆ ಚುಚ್ಚಿದ್ದೆ ಈ ಸಂಬಂಧ ನನ್ನ ಹಾಗೂ ನನ್ನ ಸ್ನೇಹಿತನ ಮೇಲೆ ಕೆಸ್ತೂರು ಠಾಣೆಯಲ್ಲಿ ಪ್ರಕರಣ ದಾಖಲೆ ಆಗಿದ್ದು, ವಿಚಾರಣೆ ನಡೆಯುತ್ತಿತ್ತು, ನಂತರ ನಮ್ಮ ಗುಂಪಿಗೂ ಅಭಿ *1* ನೇ ಆರೋಪಿ ಗುಂಪಿಗು ಆಗುತ್ತಿರಲಿಲ್ಲ ಎಂದರೆ ಸರಿ.

*4.* ದಿನಾಂಕ *20.12.2018* ರಂದು ನಾನು, ಮೃತ ರಾಕೇಶ್, ದರ್ಶನ್ ವಿಷ್ಣು, ಕುಮಾರ ಎಲ್ಲರೂ ಮಧ್ಯರಾತ್ರಿ *1.00* ಗಂಟೆ ಸಮಯದಲ್ಲಿ *1* ನೇ ಆರೋಪಿಯ ಮನೆಯ ಬಳಿಗೆ ಹೋಗಿ ಅವರ ತಾಯಿ ಹಾಗೂ ಅವನ ಜೊತೆ ಗಲಾಟೆ ಮಾಡಿದ್ದು, ಈ ಬಗ್ಗೆ ನಮ್ಮ ವಿರುದ್ಧ ದೂರು ದಾಖಲು ಆಗಿತ್ತು ಎಂದರೆ ಸರಿ.

*5.* ದಿನಾಂಕ *07.06.2019* ರಂದು ರಾತ್ರಿ *8.45* ಗಂಟೆ ಸಮಯದಲ್ಲಿ ಮುದುಗೆರೆ ಗೇಟ್ ಸಮೀಪ ನಮ್ಮ ಗುಂಪಿನ ಸ್ವಾಮಿ ಮತ್ತು ಸುದರ್ಶನ್ ರವರಿಗೆ *1* ನೇ ಆರೋಪಿ ಹಾಗೂ ಇತರರು ಹೊಡೆದು ಕೊಲೆ ಮಾಡಲು ಪ್ರಯತ್ನಿಸಿ ಈ ಬಗ್ಗೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿ.

*6.* ಈ ವಿಚಾರವಾಗಿ ಮಾತನಾಡಲು ಬನ್ನಿ ಎಂದು ಸ್ವಾಮಿ ಚಾಸಾ.*8* ರವರು ದಿನಾಂಕ *27.06.2019* ರಂದು ಸಂಜೆ *4.00* ಗಂಟೆಗೆ ಡಾಕ್ಟರ್ ತೋಟದ ಬಳಿ ತನ್ನಿ ಎಂದು ತಿಳಿಸಿದ್ದರಿಂದ ಸಂಜೆ *4.00* ಗಂಟೆ ನಾನು, ಚಾಸಾ.*3* ಹಾಗೂ *4, 8* ಹಾಗೂ ಮೃತ ಎಲ್ಲರೂ ಸೇರಿ ಕುಡಿದು ಮಾತನಾಡುತ್ತಿದ್ದೆವು, ರಾತ್ರಿ *7.00* ಗಂಟೆ ಸಮಯದಲ್ಲಿ ಮೃತ ರಾಕೇಶ್ ಮನು ಜೊತೆಗೆ ಬೈಕಿನಲ್ಲಿ ಮನೆಗೆ ಹೋಗಿ ಊಟ ಮಾಡಿಕೊಂಡು ರಾತ್ರಿ *9.30* ಗಂಟೆ ಸಮಯಕ್ಕೆ ಬಂದನು, ಪುನಃ ಊರಿಗೆ ಹೋಗಬೇಕೆಂದು ಮೃತನು ಮೋಟಾರು ಬೈಕ್ ಸಂಖ್ಯೆ ಕೆಎ-*51*-ಡಬ್ಲ್ಯೂ-*1532* ರಲ್ಲಿ ನನ್ನನ್ನು ಹಿಂಬದಿಯಲ್ಲಿ ಕೂರಿಸಿಕೊಂಡು ಇತರರಿಗೆ ಬರಲು ತಿಳಿಸಿ ಹೊರಟು ಹೋದನು, ನಂತರ ನಾನು, ಚಾಸಾ.*3* ಹಾಗೂ *4, 8* ಎಲ್ಲರೂ ರಾತ್ರಿ *11.00* ಗಂಟೆಗೆ ನಿಢಘಟ್ಟ ವಿನಯ್ ಬಾರಿಗೆ ಹೋಗಿ ಮೂರು ಬಿಯರ್ ಬಾಟಲ್ ಗಳನ್ನು ತೆಗೆದುಕೊಂಡು ನಾನು ಮತ್ತು ಮೃತ ರಾಕೇಶ್ ಬೈಕಿನಲ್ಲಿ ವಡ್ಡರದೊಡ್ಡಿಗೆ ಹೋಗುತ್ತಿದ್ದೆವು ಎಂದರೆ ಸರಿ.

*7.* ರಾತ್ರಿ *11.30* ಗಂಟೆ ಸಮಯದಲ್ಲಿ ನಮ್ಮ ಊರಿನ ಕೃಷ್ಣರವರ ಮನೆಯ ಮುಂದೆ ರಸ್ತೆಯಲ್ಲಿ ಹೋಗುತ್ತಿದ್ದಾಗ ನಮ್ಮೂರಿನ ಆರೋಪಿತರು ಎಲ್ಲರೂ ಕೈಯಲ್ಲಿ ಲಾಂಗು, ಡ್ರ್ಯಾಗನ್, ದೊಣ್ಣೆ, ರಾಡುಗಳು ಕಲ್ಲನ್ನು ಹಿಡಿದುಕೊಂಡು ಬಂದು ನಮ್ಮನ್ನು ನಿಲ್ಲಿಸಿದರು, *7* ನೇ ಆರೋಪಿ ಇವರನ್ನು ಬಿಡಬೇಡಿ ಹೊಡೆದು ಮುಗಿಸಿ ಬಿಡಿ ಎಂದು ಹೇಳಿದ, *1* ನೇ ಆರೋಪಿ ಮೃತ ರಾಕೇಶನಿಗೆ ನಿನ್ನನ್ನ ಮುಗಿಸುತ್ತೇವೆಂದು ಲಾಂಗ್ ನಿಂದ ಕತ್ತಿಗೆ ಹೊಡೆದನು, *2* ಹಾಗೂ *3* ನೇ ಆರೋಪಿತರು ನನಗೆ ಹೊಡೆಯಲು ಬಂದಾಗ ನಾನು ತಪ್ಪಿಸಿಕೊಂಡೆ, ಆಗ ಅವರೆಲ್ಲರೂ ಮೃತ ರಾಕೇಶನಿಗೆ ಮೈಕೈಗೆಲ್ಲಾ ಹಲ್ಲೆ ಮಾಡಿದರು, ನಂತರ ಚಾಸಾ.*3* ಹಾಗೂ *4* ರವರು ನನಗೆ ಸಿಕ್ಕಿದರು ಯಾರೋ ಇಬ್ಬರು ನಮ್ಮನ್ನು ಓಡಿಸಿಕೊಂಡು ಬಂದು ಲಾಂಗ್ ಹಾಗೂ ರಾಡಿನಿಂದ ಕೊಲೆ ಮಾಡಲು ಪ್ರಯತ್ನಿಸಿದರು ಎಂದು ತಿಳಿಸಿದೆನು, ನಂತರ ಚಾಸಾ.*8* ರವರ ಮನೆಯೊಳಗೆ ಹೋಗಿ ಈ ವಿಚಾರವನ್ನು ತಿಳಿಸಿದೆವು, ನಂತರ ಮರುದಿವಸ ರಾಕೇಶನು ಮೃತಪಟ್ಟ ವಿಷಯ ತಿಳಿಯಿತು, ಆರೋಪಿತರೆಲ್ಲರೂ ಹಳೆಯ ದ್ವೇಷದಿಂದ ರಾಕೇಶನನ್ನು ಹೊಡೆದು ಕೊಲೆ ಮಾಡಿದ್ದು, ನಮಗೆ ಕೊಲೆ ಮಾಡುವ ಪ್ರಯತ್ನ ಮಾಡಿದರು ಎಂದು ಈ ಎಲ್ಲಾ ವಿಷಯ ಕುರಿತು ಈಗ ಓದಿ ಹೇಳಿದಂತೆ "ನಾವು ರಾತ್ರಿ...............ಮತ್ತೆ ನೋಡಿದರೆ ಗುರುತಿಸುತ್ತೇನೆಂದು" ದಿನಾಂಕ *02.07.2019* ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

*8.* ಎರಡು ದಿವಸ ಕಳೆದ ಮೇಲೆ ಪೊಲೀಸರು ನಮ್ಮನ್ನು ಠಾಣೆಗೆ ಕರೆಯಿಸಿ ಆರೋಪಿಗಳನ್ನು ನಮಗೆ ತೋರಿಸಿದಾಗ ನಾನು ಅವರುಗಳನ್ನು ನೋಡಿ ಗುರುತಿಸಿ ಈಗ ಓದಿ ಹೇಳಿದಂತೆ ದಿನಾಂಕ *04.07.2019* ರಂತೆ ಪೊಲೀಸರ ಮುಂದೆ ಮರುಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ದಿನಾಂಕ *02.07.2019* ರ ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ.*18* ಎಂದು

ಗುರುತಿಸಲಾಯಿತು. ದಿನಾಂಕ *04.07.2019*ರ ಮರುಹೇಳಿಕೆಯನ್ನು ನಿಪಿ.*19* ಎಂದು ಗುರುತಿಸಲಾಯಿತು.

*9.* ಘಟನೆ ಹಾಗೂ ಮು.ಮಾ.ಗಳನ್ನು ನೋಡಿದ್ದರೂ ಕೂಡ ಆರೋಪಿತರು ನಮಗೆ ಹಲ್ಲೆ ಮಾಡಲು ಪ್ರಯತ್ನ ಮಾಡಿದ್ದರೂ ಕೂಡ ಯಾವುದೋ ಒತ್ತಡಕ್ಕೆ ಮಣಿದು ಆರೋಪಿತರ ವಿರುದ್ಧ ಸರಿಯಾಗಿ ಸಾಕ್ಷಿ ನುಡಿದ್ದಲ್ಲಿ ಶಿಕ್ಷೆ ಆಗುತ್ತದೆಂಬ ದೃಷ್ಟಿಯಿಂದ ಸದರಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯ ಮುಂದಿರುವ ಮು.ಮಾ.ಗಳಿಂದ ಆರೋಪಿತರು ಹಲ್ಲೆ ಮಾಡಿದ್ದರೂ ಕೂಡ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

*10.* ನಾನು ಈಗ ಅಕ್ಕೂರು ಪೊಲೀಸ್ ಠಾಣೆಯ ಕ್ರೈಂ ನಂ.*43/2024* ರಂತೆ ಸುಲಿಗೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದೇನೆಂದರೆ ಸರಿ. ಈ ಹಿಂದೆ ನನ್ನ ಮೇಲೆ ಕೆಸ್ತೂರು ಮತ್ತು ಚನ್ನಪಟ್ಟಣ ಪೊಲೀಸ್ ಠಾಣೆಯಲ್ಲಿ ಹಲವಾರು ಸುಲಿಗೆ ಪ್ರಕರಣಗಳು ದಾಖಲು ಆಗಿವೆ ಎಂದರೆ ಸರಿ. ಕ್ರಿಮಿನಲ್ ಪ್ರಕರಣಗಳಲ್ಲಿ ಕಣ್ಣಾರೆ ಕಂಡ ನಿಜಾಂಶಗಳನ್ನು ನ್ಯಾಯಾಲಯದಲ್ಲಿ ಸರಿಯಾಗಿ ನುಡಿದರೆ ಆರೋಪಿತರಿಗೆ ಶಿಕ್ಷೆ ಆಗುತ್ತದೆ ಎನ್ನುವ ವಿಚಾರ ನನಗೆ ಗೊತ್ತು ಎಂದರೆ ಸರಿ. ರಾಕೇಶನನ್ನು ಆರೋಪಿಗಳು ಕೊಲೆ ಮಾಡಿರುವ ವಿಚಾರ ಮತ್ತು ನಮ್ಮಗಳ ಮೇಲೆ ಕೊಲೆ ಪ್ರಯತ್ನ ಮಾಡಿರುವ ವಿಚಾರ ನನಗೆ ತಿಳಿದಿದ್ದರೂ ಸಹ ಸತ್ಯಾಂಶ ಹೇಳಿದ್ದಲ್ಲಿ ಆರೋಪಿತರಿಗೆ ಶಿಕ್ಷೆ ಆಗುತ್ತದೆಂದು ತಿಳಿದು, ಆರೋಪಿತರ ಮಾತುಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ *7*ನೇ ಆರೋಪಿ ಪರ ಶ್ರೀಮತಿ ಹೆಚ್ ಬಿ ಪಿ ವಕೀಲರಿಂದಃ**

1. ಮೇಲೆ ತಿಳಿಸಿದಂತೆ ಕೆಸ್ತೂರು ಹಾಗೂ ಚನ್ನಪಟ್ಟಣದಲ್ಲಿ ದಾಖಲಾದ ಕೇಸುಗಳು ಮುಕ್ತಾಯವಾಗಿದೆ ಎಂದರೆ ಸರಿ. ಪೊಲೀಸರಿಗೆ ನಾನು ಸದರಿ ಪ್ರಕರಣದಲ್ಲಿ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ. ಆರೋಪಿತರ ವಿರುದ್ಧ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ. ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.